ಮೂರುಸಲ ವಿಧಾನ ಸಭೆಯ ಸದಸ್ಯರಾಗಿ ಮತ್ತು ರಾಜ್ಯಸಭೆಯ ಸದಸ್ಯರಾಗಿ ತಮ್ಮ ರಾಜಕೀಯ ಪಟುತ್ವವನ್ನು, ಪ್ರತಿಭೆಯನ್ನು ಬೆಳೆಸಿಕೊಂಡಂಥ ಮಹಾನ್ ವ್ಯಕ್ತಿ ಅವರು. ಅವರ ಅಗಲಿಕೆಯಿಂದ ನಾವೆಲ್ಲಾ ಬಡವಾಗಿದ್ದೇವೆ. ಆದರಲ್ಲೂ ವಿಶೇಷವಾಗಿ ಬಿಜಾಪುರ ಜಿಲ್ಲೆ ಹಾಗೂ ಈಗಿನ ಬಾಗಲಕೋಟೆ ಜಿಲ್ಲೆ ಬಡವಾಗಿದೆ ಎಂಬ ಮಾತನ್ನು ಹೇಳಿ ಅವರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲಿ ಎನ್ನುವ ಪ್ರಾರ್ಥನೆ ಮಾಡುತ್ತಾ, ಅವರ ಕುಟುಂಬವರ್ಗದವರಿಗೂ ಕೂಡ, ದೇವರು ಈ ಒಂದು ಅಗಲಿಕೆಯ ದು:ಖವನ್ನು ಭರಿಸುವಂಥ ಶಕ್ತಿಯನ್ನು ಕೊಡಬೇಕೆಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡು, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಮೃತರ ಗೌರವಾರ್ಥ ಒಂದು ನಿಮಿಷ ಕಾಲ ಮೌನವನ್ನಾಚರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು)

II. ಅಧ್ಯಕ್ಷರ ಅಪ್ಪಣೆ ಮೇರೆಗೆ:-

ಹಿರಿಯಾರಿನಲ್ಲಿ ನಡೆದ ಗೋಲಿಬಾರ್ ಘಟನೆ ಕುರಿತು ಪ್ರಸ್ತಾವ

ಶ್ರೀ ಡಿ.ವಿ.ಸದಾನಂದಗೌಡ (ಪುತ್ತಾರು): ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಮುಂದೆ ಪ್ರಸ್ತಾಪ ಮಾಡಬೇಕೆಂದು ಈಗಾಗಲೇ ತಮಗೆ ನೋಟೀಸ್ ಕೂಡ ಕೊಟ್ಟಿದ್ದೇವೆ. ಬಹುಶ: ತಮಗೆಲ್ಲಾ ಗೊತ್ತಿದ್ದಂಥ ನಿನ್ನೆಯ ಘಟನೆ. ಪ್ರಾಯಶ: ಪ್ರಾರಂಭದಲ್ಲೇ ತಾವು ಹೇಳಬಹುದು, ನನಗೆ ಗೊತ್ತಿದೆ.

ಅಧ್ಯಕ್ಷರು: ಚರ್ಚೆ ಮಾಡಬಹುದು ಎಂದು ನಿನ್ನೆ ತೀರ್ಮಾನವಾಗಿದೆಯಲ್ಲಾ.

ಶ್ರೀ ಡಿ.ವಿ.ಸದನದಗೌಡ: ನಿನ್ನೆ ತೀರ್ಮಾನವಾದದ್ದು ಆ ಘಟನೆಗೆ ಸಂಬಂಧಪಟ್ಟಂತೆ ಗೋಲೀಬಾರ್ ಇರಬಹುದು, ಮತ್ತೊಂದರ ಬಗ್ಗೆ ಹೇಳಿಕೆಗಳನ್ನು ಮಾಡಿ ಅದನ್ನು ಚರ್ಚೆ ಮಾಡುವಂಥಾದ್ದು. ಆದರೆ, ಇವತ್ತು ಪರಿಸ್ಥಿತಿ ಅದಕ್ಕಿಂತಲೂ ಮುಂದಕ್ಕೆ ಹೋಗಿದೆ. ನಿನ್ನೆಯ ದಿನದಿಂದ ಅದು ಒಂದು ರೀತಿಯ ರಾಜಕೀಯ ಪರಿವರ್ತನೆಯನ್ನು ತೆಗೆದುಕೊಂಡು ಇವತ್ತು ಏನಾಗಿದೆ ಎಂದರೆ ಸಾವಿರಾರು ಮಂದಿ ನಿರಪರಾಧಿ ಕಾರ್ಯಕರ್ತರನ್ನು ಬಂಧನ ಮಾಡುವಂಥಾದ್ದು, ನೇರವಾಗಿ ಆ ಕಾರ್ಯಕರ್ತರ ಮೇಲೆ ಸವಾರಿ ಮಾಡುವಂಥ ಕೆಲಸ ಕಾರ್ಯಗಳು ಅಲ್ಲಿ ನಡೆಯುತ್ತಿವೆ. ಈಗ ಏನಾಗುತ್ತಿದೆ ಎಂದರೆ, ಒಂದು ಇಂಸ್ಟಿಡೆಂಟ್ ಹತ್ತುರೂಪ ತಾಳಿ ಈ ರೀತಿಯ ಕೆಲಸ ಕಾರ್ಯಗಳಾಗಿವೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ತೆಗೆದುಕೊಳ್ಳೋಣ. I have no objections.

ಶ್ರೀ ಡಿ.ವಿ.ಸದಾನಂದಗೌಡ: ಇದು ಸಾರ್ವಜನಿಕ ಮಹತ್ವದ ವಿಚಾರವಾಗಿದೆ. ಒಂದು ವಾರದಿಂದ ನಾವು ಕೆಲವು ಪ್ರಶ್ನೆಗಳನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಅಲ್ಲದೆ ಸದನ ಮತ್ತೆ ಒಂದು ವಾರ ಕಾಲ ಮುಂದೆ ಹೋಗುತ್ತದೆಂಬ ಭಾವನೆ ಇದೆ. ಆದ್ದರಿಂದ, ಇವತ್ತಿನ ಪ್ರಶ್ನೆಗಳನ್ನು ಇದಾದ ಮೇಲೆ ತೆಗೆದುಕೊಳ್ಳಿ.

ಅಧ್ಯಕ್ಷರು: ಈಗ ಹೋಂ ಮಿನಿಸ್ಟರ್ ಬೇರೆ ಇಲ್ಲ. ಅವರಿದ್ದಾಗ ನೀವು ಮಾತನಾಡಿದರೆ ಚೆನ್ನ ಅನ್ನಿಸುತ್ತದೆ. ಮೊದಲು ಪ್ರಶ್ನೋತ್ತರಗಳನ್ನು ಮುಗಿಸೋಣ.

ಶ್ರೀ.ಡಿ.ವಿ.ಸದಾನಂದಗೌಡ: ನಾವು ನೋಟೀಸ್ ಕೊಟ್ಟ ಮೇಲೆ ಅವರಿರಬೇಕಾಗಿತ್ತು.

ಅಧ್ಯಕ್ಷರು: ಬರುತ್ತಾರೆ he is coming now. ಹಾಗೆ ಮಾಡೋಣ, ಖಂಡಿತ ನಾನು ಅಲೋ ಮಾಡುತ್ತೇನೆ. ತಾವು ಎಕ್ಸ್‌ಪ್ಲೈನ್ ಮಾಡುವುದಾದರೆ ಅದನ್ನು ನಾನು ರೂಲ್ 69 ಕ್ಕೆ ಕನ್‌ವರ್ಟ್ ಮಾಡುತ್ತೇನೆ.

ಶ್ರೀ ಡಿ.ಎ.ಸದಾನಂದಗೌಡ: ತಾವು ಅವಕಾಶ ಕೊಡುತ್ತಿಲ್ಲವೆಂದು ನಾವು ಹೇಳುತ್ತಿಲ್ಲ. ಏಕೆಂದರೆ, ನಿನ್ನೆ ಕೂಡ ಕರೆದು ನೀವು ಹೇಳಿದ್ದೀರಿ.

ಅಧ್ಯಕ್ಷರು: ಈಗಾಗಲೇ ಈ ವಿಷಯ ಮೇಲ್ಮನೆಯಲ್ಲಿ ಚರ್ಚೆಯಾಗುತ್ತಿದೆ. ಮಾನ್ಯ ಮಂತ್ರಿಗಳು ಅಲ್ಲಿದ್ದಾರೆ ಬರುತ್ತಾರೆ.

ಶ್ರೀ ಡಿ.ಎ.ಸದನಂದಗೌಡ: ಈಗಾಗಲೇ ನಮಗೆ ಮನಸ್ಸಿಗೆ ತಂಬಾ ನೋವಾಗಿದೆ. ಎಲ್ಲಾ ವಿಚಾರಗಳಿಗೆ ಮೇಲ್ಮನೆಯಲ್ಲಿ ಪ್ರಾಮುಖ್ಯತೆ ಸಿಗಬಾರದು ಎಂದು ಅಲ್ಲ. ಆದರೆ ಪ್ರತಿ ಭಾರಿ ಎಲ್ಲಾ ವಿಚಾರಗಳು ಮೇಲ್ಮನೆಯಲ್ಲಿ ಚರ್ಚೆಯಾಗಿ ಉತ್ತರ ಬಂದಾದ ಮೇಲೆ ಆ ವಿಚಾರ ಪ್ರಸ್ತಾವಿಸುವುದು ಕಳೆದ ಕೆಲವು ಸಮಯದಿಂದ ನಡೆಯುತ್ತಿದೆ. ಏಕೆಂದರೆ ಜನಪ್ರತಿನಿಧಿಗಳಾಗಿ ಇಲ್ಲಿ ನಾವು ಚರ್ಚಿಸುವ ಸಂದರ್ಭದಲ್ಲಿ ನಮ್ಮೆಲ್ಲಾ ಮಂತ್ರಿಗಳಿಗೆ ಮೇಲ್ಮನೆಯೇ ದೊಡ್ಡ ಮನೆಯಾಗಿಬಿಟ್ಟಿದೆ. ಅದು ದೊಡ್ಡ ಮನೆಯೆಂದು ಒಪ್ಪಿಕೊಳ್ಳುತ್ತೇವೆ, ಅದರ ಬಗ್ಗೆ ಎರಡು ಮಾತಿಲ್ಲ.

ಶ್ರೀ ಬಿ.ರಮಾನಾಥ ರೈ: ಅದಕ್ಕೆ ಯಾರು ಹೊಣೆ?

ಶ್ರೀ ಡಿ.ಎ.ಸದಾನಂದಗೌಡ: ನಾವು ನಿಲುವಳಿ ಸೂಚನೆ ಕೊಟ್ಟಿದ್ದೇವೆ ಸ್ವಾಮಿ.

ಶ್ರೀ ಶಿವಾನಂದ ಎಸ್.ಪಾಟೀಲ್: ಇವರು ತಮಗೆ ಸಬ್‌ಮಿಷನ್ ಮಾಡುತ್ತಿದ್ದರೆ ಅವರಿಗೇನು ಸಮಸ್ಯೆ?

ಅಧ್ಯಕ್ಷರು: ಮಂತ್ರಿಗಳಿದ್ದರೆ ಇನ್ನು ಚೆನ್ನ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಶಿವಾನಂದ ಎಸ್.ಪಾಟೀಲ್: ಅವರು ಕೊಶ್ಚನ್ ಮಾಡುತ್ತಿಲ್ಲ, ತಾವು ಅಲೋ ಮಾಡುವುದಿಲ್ಲವೆಂದರೆ ಅವರು ಕುಳಿತುಕೊಳ್ಳುತ್ತಾರೆ. ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡದಿದ್ದರೂ ಸಬ್‌ಮಿಷನ್‌ಗಾದರೂ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ನಾನು ಪ್ರಶ್ನೋತ್ತರ ಆದಮೇಲೆ ತೆಗೆದುಕೊಳ್ಳೋಣ ಅನ್ನುತ್ತಿದ್ದೇನೆ. ಅದಕ್ಕಿಂತ ಮುಂಚೇನೆ ಬೇಕೆಂದರೆ ತೆಗೆದುಕೊಳ್ಳಿ. before question hour, I have no objection.

ಶ್ರೀ ಡಿ.ಎ.ಸದಾನಂದಗೌಡ: ತಾವು ದಯವಿಟ್ಟು ಕೋಪ ಮಾಡಿಕೊಳ್ಳಬೇಡಿ. ನಾನಂತೂ ತಮ್ಮ ಕೋಪದಲ್ಲಿ ತಮ್ಮ ಎದುರು ಮಾತನಾಡುವುದಿಲ್ಲ.

ಅಧ್ಯಕ್ಷರು: ಇಲ್ಲ ನಾನು ಕೋಪನೇ ಮಾಡಿಕೊಂಡಿಲ್ಲ. ನೀವು ಸುಮ್ಮನೆ ಹೇಳುತ್ತಿದ್ದೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಗೌರವಾನ್ವಿತ ಅಧ್ಯಕ್ಷರೇ, ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಇಂತಹ ಪ್ರಸಂಗದಲ್ಲಿ ಏನು ಮಾತುಗಳನ್ನು ಹೇಳಿದ್ದಾರೆಂಬುದು ಬಹಳ ಪ್ರಮುಖವಾದ ಸಂದರ್ಭ ಅದನ್ನು ಸದನದ ಗಮನಕ್ಕೆ ರಾಜ್ಯದ ಗಮನಕ್ಕೆ ತರುವುದು ಬಹಳ ಅವಶ್ಯಕವೆಂದು ನಾನು ಭಾವಿಸಿದ್ದೇನೆ. ಜೊತೆಗೆ ನಮ್ಮ ಸಭಾನಾಯಕರಾದ ಮಾನ್ಯ ಎಸ್.ಎಂ.ಕೃಷ್ಣ ಅವರು ರಾಜ್ಯದ ರೈತರ ಪರವಾಗಿ ದೆಹಲಿಗೆ ಹೊರಟುಹೋಗಿದ್ದಾರೆ. ಅವರೂ ಪ್ರಾರಂಭದ ದಿನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧ ಘೋಷಣೆ ಮಾಡಿದಾಗ ನೀವೆಲ್ಲಾ ಎರಡು ನಾಲಿಗೆಯವರು ಎಂದು ನಮಗೆ ಹೇಳಿದ್ದರು. ಯಾರಿಗೆ? ಈ ಕಡೆ ಕುಳಿತಿದ್ದೇವಲ್ಲಾ, ನಮಗೆ ಹೇಳಿದ್ದಾರೆ, ಬಿ.ಜೆ.ಪಿ.ಯವರಿಗೆಲ್ಲ ಯಾಕೆಂದರೆ ಅವರು ಇನ್ನೂ ಆಡಳಿತ ನಡೆಸಿಲ್ಲ, ನಮ್ಮ ಜೊತೆ ಸೇರಿಕೊಂಡು ಮಾಡಬಹುದಾಗಿತ್ತು, ಕೆಡಿಸಿಕೊಂಡುಬಿಟ್ರು, ನಾವೇ ಕೆಟ್ಟುಹೋದೆವು.

ಶ್ರೀ ಬಿ.ರಮಾನಾಥ ರೈ: ಮುಗಿದು ಹೋಗಿದ್ದಕ್ಕೆ ತಲೆಕೆಡಿಸಿಕೊಳ್ಳಬೇಡಿ, ಇನ್ನಾದರೂ ಒಂದಾಗಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾವೇನ್ನೂ ತಲೆ ಕೆಡಿಸಿಕೊಂಡಿಲ್ಲ, ತಲೆ ಕೆಡಿಸಿಕೊಳ್ಳುವುದು ಇಲ್ಲ. ನನ್ನ ಸ್ನೇಹಿತರು ಅಂತ ಸದಾನಂದಗೌಡ ಬಗ್ಗೆ ಪ್ರೀತಿಯಿಂದ ಒಂದು ಮಾತು ಹೇಳಿದೆ. ಈ ಕಡೆ ಕುಳಿತವರಿಗೆ ಎರಡು ಸಾಲಗೆ ಇದೆ ಅಂದರೆ ಪಾಪ, ಅವರನ್ನೂ ಶಿಪ್ಪನವರನ್ನೂ ಯಾಕೆ ಸೇರಿಸಿಕೊಳ್ಳಬೇಕು? ಅವರಿನ್ನೂ ಆಡಳಿತದ ರುಚಿ ನೋಡಿಲ್ಲ, ಕರ್ನಾಟಕದ ಜನತೆ ಅವರ ಆಡಳಿತಕ್ಕೆ ಮಾನ್ಯತೆ ಕೊಟ್ಟಿಲ್ಲ ಮುಂಚೆ ಕೊಡಲಿ. ಅದು ಬೇರೆ ವಿಚಾರ. ಎರಡು ನಾಲಿಗೆಯವರು ಅಂದರು, ಈಗ ಇವರಿಗೆ ನಾವು ಏನಂತ ಹೇಳಬೇಕು? ಅದನ್ನು ನಾನು ನಮ್ಮ ಪತ್ರಿಕಾರಂಗದ ಮಿತ್ರರಿಗೇ ಬಿಟ್ಟುಬಿಡುತ್ತೇನೆ. ಅವರಿದ್ದಿದ್ದರೆ ಚೆನ್ನಾಗಿತ್ತು, ಏಕೆಂದರೆ ಪ್ರಾರಂಭದಲ್ಲಿ ಏನೇನು ವೀರಾವೇಶದ ಮಾತುಗಳನ್ನಾಡಿದರು, ಹಿಟ್ ಅಂಡ್ ರನ್, ಅಂದರೆ ನಾವೇನೋ ಹೇಳಿ ಓಡಿಹೋಗಿ ಬಿಡುತ್ತೇವೆ, ನನ್ನ ಮುಂದೆ ಏನೂ ಮಾತನಾಡುವುದೇ ಇಲ್ಲ. ಎಂದೆಲ್ಲ ಹೇಳಿದರು.

ಶ್ರೀ ಕರಿಯಣ್ಣ: ತಾವುಗಳೇ ಅವರನ್ನು ನೀವು ಹೋಗಿ ಕೇಂದ್ರದಲ್ಲಿ ಮನವಿ ಮಾಡಿಕೊಳ್ಳಿ ಎಂಬ ಅಭಿಪ್ರಾಯ ಪಟ್ಟಿದ್ದರಿಂದ ಈಗ ಕರೆದುಕೊಂಡು ಹೋಗಿದ್ದಾರೆ, ಅವರಿದ್ದಾಗ ಮಾತನಾಡಿದ್ದರೆ ಚೆನ್ನಾಗಿತ್ತು ಎಂಬುದು ನನ್ನ ಅಭಿಪ್ರಾಯ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮುಖ್ಯಮಂತ್ರಿಗಳಿಗೆ ದೆಹಲಿಗೆ ಹೋಗಿ ಕಾಸೀಸ್ಕೊಂಡು ಬನ್ನಿ ಎಂದ ಅಲ್ಲ ಹೇಳಿದ್ದು. ನೀವು ರೇಷ್ಮೆ ಬೆಳೆಗಾರರಿಗೆ ಬೆಂಬಲ ಬೆಲೆ ಇಲ್ಲಿ ಘೋಷಣೆ ಮಾಡಿ ಆಮೇಲೆ ಅಲ್ಲಿ ಹೋಗಿ ಕೇಳಿ ಎಂದು ಹೇಳಿದ್ದು. ಗೊತ್ತಾಯ್ತಾ? ಅಧ್ಯಕ್ಷರೇ, ಇವರೇನು ಹೇಳಿದ್ದಾರೆ ಅಂದರೆ-

> 'ನಿಮ್ಮ' ರೂಲಿಂಗ್ ವಿರುದ್ಧ ನಾನು ಹೋಗುವುದಿಲ್ಲ ಆದರೆ ಒಂದು ವಿಷಯ ಏನೆಂದರೆ ಈ ಕುರಿತು ಮೋಷನ್ ಮೂವ್ ಮಾಡಲು ನಮಗೆ ಅವಕಾಶ ಕೊಡಬೇಕು, ಕ್ವೊಶ್ಚನ್ ಅವರನ್ನು ಸಸ್ಪೆಂಡ್ ಮಾಡಬೇಕು, ಇದು ಬಹಳ ಮಹತ್ವದ ವಿಚಾರ. ಕಾರಣ ಹಲವಾರು ಜನ ಪ್ರಾಣ ಕಳೆದುಕೊಂಡಿದ್ದಾರೆ ಅವರ ಹೆಣಗಳು ಇರುವಾಗ ನಾವು ಇದನ್ನು ಚರ್ಚೆ ಮಾಡದೇಹೋದರೆ ಹೇಗೆ'

ಎಂದು ಖರ್ಗೆಯವರು, ಅವರು ಆಕಸ್ಮಿಕವಾಗಿಯೋ ದುರ್ದೈವದಿಂದಲೋ ಈಗ ಗೃಹಮಂತ್ರಿಗಳಾಗಿ ಹೋಗಿದ್ದಾರೆ. ಇಂಥ ಸನ್ನಿವೇಶದಲ್ಲಿ ಇಂಥ ಪ್ರಮುಖವಾದ ಘಟನೆ ಬಗ್ಗೆ ತಮ್ಮ ರೂಲಿಂಗಿದೆ, ತಮ್ಮ ಸಚಿವಾಲಯದ ಆಪ್ತ ಬಂಧುಗಳ ನನಗೆ ತಂದು ಮುಂಚಿತವಾಗೇ ತೋರಿಸಿಬಿಟ್ಟರು. ನೋಡಿ ರೂಲಿಂಗಿದೆ, ಇದನ್ನೆಲ್ಲಾ ಮಾತನಾಡಲಾಗುವುದಿಲ್ಲ, ಪೊಲೀಸ್ ಲಾರಿ ಚಾರ್ಜು ಫೈರಿಂಗ್ ನಾವು - ಇದರ ಬಗ್ಗೆಯೆಲ್ಲಾ ನೀವು ನಿಲುವಳಿ ಸೂಚನೆ ಕಳುಹಿಸಲಾಗುವುದಿಲ್ಲವೆಂದು ಹೊಸ ಶಾಸಕರಿಗೆ ಪುಸ್ತಕ ಕೊಡುತ್ತಾರಲ್ಲಾ ಆ ರೀತಿ ನನಗೂ ಈ ಪುಸ್ತಕವನ್ನು ಕೊಟ್ಟಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು. ನಿನ್ನೆ ದಿವಸ ತಮ್ಮ ಪೀಠದಿಂದ ದಯಪಾಲಿಸಿದ ಆಜ್ಞೆಯನ್ನು ದಯಮಾಡಿ ಪರಿಪಾಲಿಸಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಆ ತೀರ್ಮಾನ ಏನೆಂದರೆ, 'ನಾನು ಹೆಚ್ಚಿನ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ, ನನಗೆ ಪೂರ್ತಿ ಮಾಹಿತಿಗೊತ್ತಿಲ್ಲ. ಮಾಹಿತಿ ತರಿಸಿಕೊಂಡನಂತರ ಚರ್ಚೆ ಮಾಡೋಣ. ಎಂದು, ಆದ್ದರಿಂದ ಆಡಳಿತ ನಡೆಸುತ್ತಿರುವ ಭೂಪತಿಗಳು ಮಾತಿಗೆ ತಪ್ಪಿರುವುದನ್ನು ನಾವು ಬಹಳ ಸಲ ನೋಡಿದ್ದೇವೆ. ಮಾತಿಗೆ ತಪ್ಪಬಹುದು

ಅಂತಲೇ ನಾವು ನಿಲುವಳಿ ಸೂಚನೆ ಕಳುಹಿಸಿದ್ದು. ತಾವು ಯೋಚನೆ ಮಾಡಿ, ನಿನ್ನೆ ಸಂಜೆ ಹೇಳಿರುವುದ ನಿಜ, ಮಾಹಿತಿ ತರಿಸಿಕೊಳ್ಳಲು 24 ಗಂಟೆಯೇನೂ ಬೇಕಾಗಿರಲಿಲ್ಲ. ನಿನ್ನೆ 12 ಗಂಟೆಗೆ ಫೈರಿಂಗ್ ಆಗಿರುವುದು, ಅವರ ಕಾರಿಗೆ ವೈರ್‌ಲೆಸ್ ಹಾಕಿರುತ್ತಾರೆ, ಅವರ ಸುತ್ತ ಮುತ್ತ ವೈರ್‌ಲೆಸ್ ಸಿಸ್ಟಂ ಇರುತ್ತದೆ. ಒಂದೊಂದು ಸೆಕೆಂಡಿಗೂ ಮುಖ್ಯ ಕಾರ್ಯದರ್ಶಿ, ಗೃಹಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿಗಳಿಗೆ ಗೃಹಮಂತ್ರಿಗಳಿಗೆ ಇಂಟೆಲಿಜೆನ್ಸ್ ಚೀಫ್‌ಗೆ ಮಾಹಿತಿ ಬರುತ್ತಲೇ ಇರುತ್ತದೆ. ಇಲ್ಲಿ ನೋಡಿ, ಯಲ್ಲಾಪುರದಲ್ಲಿ ಇವತ್ತೊಂದು ರೈತರ ದೊಡ್ಡ ಹೋರಾಟ ನಡೆಯುತ್ತಿದೆ, ಈಗಾಗಲೇ ಮೂರ್ನಾಲ್ಕು ಸಾವಿರ ಜನ ಸೇರಿದ್ದಾರೆ. ಅಲ್ಲಿ ಏನು ಫೈರಿಂಗ್ ಮಾಡಿ ಯಾರನ್ನು ಸಾಯಿಸುತ್ತಾರೋ ಪೊಲೀಸರು ಗೊತ್ತಿಲ್ಲ. ಈ ರಾಕ್ಷಸೀ ಕೃತ್ಯವನ್ನು ಖಂಡಿಸಿ ನಾವು ಮಾತನಾಡಬೇಕೆಂಬುದು ನಮ್ಮ ಉದ್ದೇಶ' ಎಲ್ಲಿ ಪೊಲೀಸ್ ಇಲಾಖೆ ಸಂಪೂರ್ಣ ವಿಫಲವಾಗಿದೆಯೆಂಬುದನ್ನು ಸರ್ಕಾರದ ಗಮನಕ್ಕೆ ತರಬೇಕೆಂಬುದು ನಮ್ಮ ಉದ್ದೇಶ ಮಾಡುವುದು ಬಿಡುವುದು ಅವರಿಗೆ ಸೇರಿದ್ದು, ನಾವೇನೂ ಮಾಡೋಕಾಗೋಲ್ಲ. ಝಳಕಿಯಲ್ಲಿ ಇನ್ನು ಸಹಿತ ಸೂತಕ ಕಳೆದಿಲ್ಲ ಸೂತಕ ಅನ್ನುತ್ತೇವೆಲ್ಲಾ ಕೆಲವರಿಗೆ 11 ದಿನ, ಕೆಲವರಿಗೆ 12 ದಿನ, ಕೆಲವರು 30-40 ದಿವಸ ಹಿಡೀತಾರೆ. ಅಂತಹ ಸೂತಕ ಇನ್ನೂ ಕಳೆದಿಲ್ಲ. ಮತ್ತೆ ಕೆಲವರೆಲ್ಲಾ ಟೇಬಲ್ ಕುಟ್ಟಿದರು. 2000 ಇಸವಿಯಲ್ಲಿ ಫೈರಿಂಗ್ ಆಗಲಿಲ್ಲವೆಂದು ಡೋಲು ಬಜಾಯಿಸಿದಂತೆ ಡೋಲು ಹೊಡೆದರು. ಈಗ ಯಾವ ಡೋಲನ್ನು ಹೊಡೀತಾರೆಂಬುದು ಇನ್ನೂ ನನಗೆ ಗೊತ್ತಿಲ್ಲ. ಆದ್ದರಿಂದ ತಮ್ಮಲ್ಲಿ ಅಧ್ಯಕ್ಷರೇ ಅತಿ ವಿನಯದಿಂದ ಪೊಲೀಸ್ ದೌರ್ಜನ್ಯ, ರಾಕ್ಷಸೀ ಪ್ರವೃತ್ತಿ, ಈ ಸರ್ಕಾರದ ವಿಫಲತೆ - ಇವುಗಳ ಬಗ್ಗೆ ಚರ್ಚೆ ಮಾಡಲು ಸಮಯವನ್ನು ದಯ ಪಾಲಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಅಧ್ಯಕ್ಷರು: ಪಾಟೀಲರೇ, ನಿನ್ನೇನೇ ಕಮಿಟ್‌ಮೆಂಟಾಗಿದೆ, ಚರ್ಚೆಗೆ ಆಲೋಮಾಡುತ್ತೇವೆಂದು ನಮ್ಮ ಉಪಾಧ್ಯಕ್ಷರು ಹೇಳಿದ್ದಾರೆ, ನಾನೂ ಹೇಳಿದ್ದೇನೆ. ಖರ್ಗೆಯವರೂ ಇಲ್ಲಿದ್ದರು. We will allow it. We will take up question hour in the afternoon or on some other day.

ಶ್ರೀ ಸಿ.ಎಸ್.ನಾಡಗೌಡ: ಇಲ್ಲಿ ಕ್ವೊಶ್ಚನ್ ಅವರ್ ಆದ ಮೇಲೆ ತೆಗೆದುಕೊಳ್ಳಬಹುದು ಈ ವಿಚಾರಕ್ಕಾಗಿ ಮೇಲ್ಮನೆಯಲ್ಲಿ ಗೃಹಸಚಿವರಿದ್ದಾರೆ.

ಅಧ್ಯಕ್ಷರು: ಅಲ್ಲೂ ಇದೇ ವಿಷಯವನ್ನು ಎತ್ತಿದ್ದಾರೆ, ಅದು ಎಷ್ಟು ಹೊತ್ತಿಗೆ ಮುಗೀಯುತ್ತದೆಂಬುದು ಗೊತ್ತಿಲ್ಲವಲ್ಲಾ We will commence. What is there?

ಶ್ರೀ ಶಿವಾನಂದ ಎಸ್.ಪಾಟೀಲ್: ಮೇಲ್ಮನೆಗೆ ಅಲ್ಲಿನ ಫ್ಲೋರ್‌ಲೀಡರ್ ಹೋಗಿ ರಿಪ್ಲೈ ಮಾಡಲಿ. ಹೋಂ ಮಿನಿಸ್ಟ್ರ ಇಲ್ಲಿಗೆ ಬರಲಿ. ಇದು ಬಹಳ ಪ್ರಮುಖವಾದ ವಿಷಯ ಅಲ್ಲವೆ?

ಅಧ್ಯಕ್ಷರು: ಆಯಿತು, ಕ್ವೊಶ್ಚನ್ ಅವರ್ ಆದ ಮೇಲೆ ತೆಗೆದುಕೊಳ್ಳೋಣ. ಮಾನ್ಯ ಸಿಂಧ್ಯ ಅವರೆ, ದಯಮಾಡಿ ಸಹಕರಿಸಿ.

ಶ್ರೀ ಪಿ.ಜಿ.ಸಿಂಧ್ಯಾ: ತಾವು ಹೇಳಿದ್ದನ್ನು ನಾವು ಶಿರಸಾವಹಿಸಿ ಪಾಲಿಸುತ್ತೇವೆ ಸ್ವಾಮಿ.

ಅಧ್ಯಕ್ಷರು: ಈಗ ಪ್ರಶ್ನೋತ್ತರ. ಪ್ರಶ್ನೆ ಸಂಖ್ಯೆ:196 (1954) ಈಗ 15 ಪ್ರಶ್ನೆಗಳಿಗೆ ಉತ್ತರ ಬಂದಿದೆ. 15 ಪ್ರಶ್ನೆಗಳಿಗೂ 4 ನಿಮಿಷ ತೆಗೆದುಕೊಂಡರೂ ಒಂದು ಗಂಟೆಯಾಗುತ್ತದೆ. ಈಗ 11-10 ಗಂಟೆ. ಪ್ರಶ್ನೋತ್ತರವನ್ನು ನಾವು 12-10ಕ್ಕೆ ಮುಗಿಸೋಣ.

III) ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಸಿಂಧಗಿಯಲ್ಲಿ ರೈತ ಸಂಪರ್ಕ ಕೇಂದ್ರಗಳು

196 (1654) ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸಿಂಧಗಿ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ರೈತ ಸಂಪರ್ಕ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ?

2) ಪ್ರಾರಂಭಿಸದಿದ್ದರೆ ಅವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

3) ಸದರಿ ರೈತ ಸಂಪರ್ಕ ಕೇಂದ್ರಗಳಿಗೆ ಸಿಬ್ಬಂದಿಯನ್ನು ನಿಯುಕ್ತಿಗೊಳಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಯಾವಾಗ ನೇಮಕ ಮಾಡಲಾಗುವುದು?

4) ಈ ಕೇಂದ್ರಗಳಿಂದ ರೈತರಿಗಾಗುವ ಲಾಭಗಳೇನು?

ಶ್ರೀ ವಿ.ಎಸ್.ಕಾಜಲಗಿ (ಕೃಷಿ ಸಚಿವರು):

1) ಸಿಂಧಗಿ ತಾಲ್ಲೂಕಿನಲ್ಲಿಯ ಎಲ್ಲಾ ಮೂರು ಹೋಬಳಿಗಳಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಕ್ರ.ಸಂ.	ಹೋಬಳಿ	ರೈತ ಸಂಪರ್ಕ ಕೇಂದ್ರ
1.	ಆಲಮೇಲ್	ಆಲಮೇಲ್
2.	ದೇವರಹಿಪ್ಪರಗಿ	ದೇವರಹಿಪ್ಪರಗಿ
3.	ಸಿಂಧಗಿ	ಸಿಂಧಗಿ

2) ಪ್ರಶ್ನೆ ಉದ್ಭವಿಸುವುದಿಲ್ಲ

3) ಈಗಾಗಲೇ ಈ ಕೆಳಗಿನಂತೆ ಸಿಬ್ಬಂದಿಯನ್ನು ಸದರಿ ರೈತ ಸಂಪರ್ಕ ಕೇಂದ್ರಗಳಿಗೆ ನಿಯುಕ್ತಿಗೊಳಿಸಲಾಗಿದೆ.

ರೈತ ಸಂಪರ್ಕ ಕೇಂದ್ರ	ಕೃಷಿ ಅಧಿಕಾರಿ	ಸಹಾಯಕ ಕೃಷಿ ಅಧಿಕಾರಿ	ಕೃಷಿ ಸಹಾಯಕ
ಆಲಮೇಲ್	ಖಾಲಿ	3	10
ದೇವರಹಿಪ್ಪರಗಿ	1	4	14
ಸಿಂಧಗಿ	1	4	14

4) ರೈತ ಸಂಪರ್ಕ ಕೇಂದ್ರಗಳಿಂದ ರೈತರಿಗೆ ಆಗುವ ಲಾಭಗಳು:

1. ಬಳೆ ಉತ್ಪಾದನಾ ಅವಕಾಶಗಳು ಉತ್ಪಾದನಾ ಕ್ರಮಗಳು ಮಾರುಕಟ್ಟೆ ಮಾಹಿತಿ ಮುಂತಾದವುಗಳ ಬಗ್ಗೆ ಇತ್ತೀಚಿನ ಮಾಹಿತಿಯು ದೊರೆಯುತ್ತದೆ.
2. ಅತ್ಯವಶ್ಯಕ ಕೃಷಿ ಪರಿಕರಗಳಾದ ಬೀಜ ಇತ್ಯಾದಿಗಳು ಸ್ಥಳೀಯವಾಗಿಯೇ ದೊರೆಯುತ್ತವೆ.
3. ಬೀಜ ಮೊಳಕೆ ಗುಣಮಟ್ಟ ಪರೀಕ್ಷೆ ಮಣ್ಣು ಪರೀಕ್ಷೆ ಮುಂತಾದ ಪ್ರಾಥಮಿಕ ಪರೀಕ್ಷೆ ಸವಲತ್ತುಗಳನ್ನು ಸ್ಥಳೀಯವಾಗಿ ಒದಗಿಸಲಾಗುತ್ತಿದೆ.